ಪ್ರತಿಬಿಂಬ
**PRATIBIMBA – Multidisciplinary Kannada Research Journal of IIMRD**
**ISSN: 2582-2284**
**Vol-3 Issue 2, Sep-Oct, 89-93**
**©*IIMRD*, Mysuru**
IIMRD JOURNALS
**www.iimrd.com**

# ಬಸವ ಧರ್ಮದ ಬೆಳವಣಿಗೆಯಲ್ಲಿ ಜಗದ್ಗುರು ಮಾತೆ ಮಹಾದೇವಿಯವರ ಪಾತ್ರ

**ಪೂಜಾ ಸೂರ್ಯಕಾಂತ**[*]

[*] ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

***ಸಾರಾಂಶ* (Abstract)**

*ಮಾತೆ ಮಹಾದೇವಿರವರು ಜಗತ್ತಿನ ಮೊಟ್ಟ ಮೊದಲ ಮಹಿಳಾ ಜಗದ್ಗುರು ಮತ್ತು ಪ್ರಮುಖ ಆಧ್ಯಾತ್ಮದ ಗುರು. ಮಾರ್ಚ್ 13, 1946ರಂದು ಚಿತ್ರದುರ್ಗ ಜಿಲ್ಲೆಯ ಸಾಸಲಹಟ್ಟಿಯಲ್ಲಿ ಮಾತೆ ಮಹಾದೇವಿ ಅವರು ಜನಿಸಿದರು. ತಂದೆ ಬಸಪ್ಪ, ತಾಯಿ ಗಂಗಮ್ಮ. ಮಾತೆ ಮಹಾದೇವಿ ಅವರ ಬಾಲ್ಯದ ಹೆಸರು ರತ್ನಾ. 19ನೇ ವಯಸ್ಸಿನಲ್ಲಿಯೇ ಆಧ್ಯಾತ್ಮದತ್ತ ಒಲವು ತೋರಿ ದೀಕ್ಷೆ ಪಡೆದರು. ಬಿಎಸ್ಸಿ, ಎಂ.ಎ, ತತ್ವಶಾಸ್ತ್ರದಲ್ಲಿ ಪದವಿ ಪಡೆಯುವ ಮೂಲಕ ಅಗಾಧ ಜ್ಞಾನ ಸಂಪಾದಿಸಿದ್ದರು. ಪ್ರತ್ಯೇಕ ಲಿಂಗಾಯತಧರ್ಮಕ್ಕೆ ಒತ್ತಾಯಿಸುತ್ತಲೇ ತಮ್ಮ 73 ನೇ ವಯಸ್ಸಿನಲ್ಲಿ (ಮಾರ್ಚ್ 14, 2019) ಲಿಂಗೈಕ್ಯರಾದರು. ಸ್ತ್ರೀ ಸಮಾನತೆಯ ಪ್ರತೀಕವೆಂಬಂತೆ ಮಹಿಳಾ ಜಗದ್ಗುರು ಪೀಠ ಸ್ಥಾಪಿಸಿ ಬಸವ ಧರ್ಮದ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದಾರೆ.*

***ಮುಖ್ಯಪದಗಳು* (Keywords):** ಧಾರ್ಮಿಕ ಚಳುವಳಿ, ಮಾತೆ ಮಹಾದೇವಿ, ಲಿಂಗಾಯತ ಧರ್ಮ, ವಚನ ಸಾಹಿತ್ಯ.

## ಪೀಠಿಕೆ

ಮೊದಲ ಮಹಿಳಾ ಜಗದ್ಗುರುಗಳಾದ ಮಾತೆ ಮಹಾದೇವಿಯವರು ಸ್ವತಃ ಸಾಹಿತಿಗಳು. ಅವರು ಹಲವಾರು ವಚನ ಸಾಹಿತ್ಯ ಕೃತಿಗಳನ್ನು ರಚಿಸಿ ಸಾಹಿತ್ಯ ಮತ್ತು ಧರ್ಮಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ. ಸ್ತ್ರೀ ಸಮಾನತೆಯ ಪ್ರತೀಕವೆಂಬಂತೆ ಮಹಿಳಾ ಜಗದ್ಗುರು ಪೀಠ ಸ್ಥಾಪಿಸಿದರು. ಅಲ್ಲದೇ 1981 ರಲ್ಲಿ ಕೆನಡಾ ಮತ್ತು ಅಮೇರಿಕಾಕ್ಕೆ ಹೋಗಿ ಲಿಂಗಾಯತ ಧರ್ಮ ಪ್ರಚಾರ ಮಾಡಿ ಅದ್ವಿತೀಯರೆನಿಸಿದ್ದಾರೆ. 1988 ರಿಂದ ಪ್ರತಿ ವರ್ಷ ಶರಣಮೇಳ ಧಾರ್ಮಿಕ ಉತ್ಸವವನ್ನು ಮಾಡಿ ಲಕ್ಷಾಂತರ ಭಕ್ತರಿಗೆ ಜ್ಞಾನ ದಾಸೋಹ ಮಾಡಿದ್ದಾರೆ. ಶಿವಶರಣ ಬಸವಣ್ಣನ ಕರ್ಮಭೂಮಿ ಬಸವ ಕಲ್ಯಾಣದಲ್ಲಿ ಕಲ್ಯಾಣ ಪರ್ವ ಮಾಡಿ ಮಹಾಮನೆಯ ಆವರಣದಲ್ಲಿ 108 ಅಡಿ ಎತ್ತರದ ವಿಶ್ವಗುರು ಬಸವಣ್ಣನ ಮೂರ್ತಿ ಹಾಗೂ ಬೆಂಗಳೂರಿನಲ್ಲಿ ಬಸವ ಮಂಟಪ ನಿರ್ಮಿಸಿದ್ದಾರೆ. ಕೇವಲ ಧಾರ್ಮಿಕ ಕಾರ್ಯಗಳಿಗೆ ಮಾತ್ರ ಸೀಮಿತವಾಗದೆ ಹಲವಾರು ಸಾಮಾಜಿಕ ಕಾರ್ಯಗಳಲ್ಲಿ ಗುರುತಿಸಿಕೊಂಡು ಅನಾಥ ಮಕ್ಕಳಿಗೆ ಆಶ್ರಯ

*Please cite this article as: ಪೂಜಾ ಸೂರ್ಯಕಾಂತ. (2021). ಬಸವ ಧರ್ಮದ ಬೆಳವಣಿಗೆಯಲ್ಲಿ ಜಗದ್ಗುರು ಮಾತೆ ಮಹಾದೇವಿಯವರ ಪಾತ್ರ. ಪ್ರತಿಬಿಂಬ: ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 3(2). ಪು.ಸಂ. 89–93.*

ನೀಡಿ ವಿದ್ಯಾದಾನ ಮಾಡಿದ್ದಾರೆ. ದೈವ ಸ್ವರೂಪದಂತೆ  ಕಂಗೊಳಿಸುವ ಮಾತೆ ಮಹಾದೇವಿ ಬಹುಮುಖ ವ್ಯಕ್ತಿತ್ವ/ಪ್ರತಿಭೆಯುಳ್ಳ ಧಾರ್ಮಿಕ ಗುರುಗಳಲ್ಲಿ ಪ್ರಮುಖರು.  ಹೆಪ್ಪಿಟ್ಟ ಹಾಲು, ತರಂಗಿಣಿಯಂತಹ ಅತ್ಯದ್ಭುತ ಕಾದಂಬರಿಗಳನ್ನು ಕನ್ನಡಿಗರಿಗೆ ನೀಡಿದ ಅಪ್ಪಟ ಬರಹಗಾರ್ತಿ. ಹೆಪ್ಪಿಟ್ಟ ಹಾಲು ಕಾದಂಬರಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದಿದ್ದು, ಇದರಿಂದ ಅವರಿಗಿದ್ದ ಸಾಹಿತ್ಯ ಮತ್ತು ಬರವಣಿಗೆಯಲ್ಲಿ ಆಸಕ್ತಿ ಮತ್ತು ಜ್ಞಾನವನ್ನು ತಿಳಿದುಕೊಳ್ಳಬಹುದಾಗಿದೆ.

ಜಗತ್ತಿನೆಲ್ಲೆಡೆ ಇಂದು ಬುದ್ಧ, ಬಸವ, ಅಂಬೇಡ್ಕರ್,  ವಿವೇಕಾನಂದ, ಪೆರಿಯಾರ್ ವಿಚಾರಧಾರೆಗಳು ಅತಿ ಅವಶ್ಯಕವಾಗಿವೆ. ಅಂತಹ ಬಸವಣ್ಣನ ವಚನಗಳನ್ನು ತತ್ವಗಳನ್ನು ಪ್ರವಚನ, ಪ್ರಾರ್ಥನೆ ಮತ್ತು ಭಕ್ತರ ಮೂಲಕ ನಾಡಿನಾದ್ಯಾಂತ ಎಲ್ಲರ ಮನಸ್ಸು ಮತ್ತು ಮನೆಯೊಳಗೆ ತಲುಪಿಸುವುದರ ಮೂಲಕ ಬಸವತತ್ವದ ದೀವಿಗೆ ಹಚ್ಚಿದ್ದಾರೆ. ಹೆಪ್ಪಿಟ್ಟ ಹಾಲು ಕಾದಂಬರಿಯನ್ನು 1970 ರಲ್ಲೇ ರಚಿಸಿದ್ದರೂ ಕೂಡ; ಸನ್ಯಾಸಿಗಳು ಕಾದಂಬರಿ ಬರೆದರೆ ಟೀಕೆ ಎದುರಿಸಬೇಕಾಗಬಹುದೆಂದು ಪ್ರಕಟಿಸಿರಲಿಲ್ಲ.  ಆದರೆ ಎಸ್.ಎಂ ಅಂಗಡಿರವರು ಪ್ರೋತ್ಸಾಹಿಸಿ 1973 ರಲ್ಲಿ ಪ್ರಕಟಿಸಲಾಯಿತು. ಅದು ನಿರೀಕ್ಷೆ ಮೀರಿ ಯಶಸ್ವಿಯಾಗಿ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಪಡೆಯಿತು. ಅದೇ ರೀತಿ 'ತರಂಗಿಣಿ' ಶಿವಶರಣೆ ಅಕ್ಕಮಹಾದೇವಿಯನ್ನು ಕುರಿತಾದ ಅತ್ಯದ್ಬುತ ಕಾದಂಬರಿ. ಓದುತ್ತ ಹೋದಾಗ ಅಕ್ಕಮಹಾದೇವಿ ನಮ್ಮೊಳಗೆ ಅವತರಿಸಿದ ರೋಮಾಂಚಕ ಅನುಭವವಾಗುತ್ತದೆ. ಅಕ್ಕನ ಬಾಲ್ಯದಿಂದ ಶ್ರೀಶೈಲ ಕದಳಿ ಪಯಣದವರೆಗಿನ ಆಕೆಯ ಜೀವನವನ್ನು ಸುಂದರ ವಚನಗಳೊಂದಿಗೆ ವಿವರಿಸುತ್ತಾ ಸಾಗಿರುವರು ಇದು ತುಂಬ ದೊಡ್ಡ ಕಾದಂಬರಿ.

ಸಾಹಿತ್ಯದ ಮೂಲಕ ಸಾಕಷ್ಟು ಕೃಷಿ ಮಾಡಿ ಪ್ರವಚನದ ಮೂಲಕ ಬಸವ ತತ್ವಗಳ ಪಸರಿಸಿದಂತೆ ಸಿನಿಮಾ ಮಾಧ್ಯಮದ ಮೂಲಕವೂ ಬಸವಣ್ಣನವರ ಬಹುಮುಖ ವ್ಯಕ್ತಿತ್ವವನ್ನು ಸಮಾಜದ ಮುಂದಿಡಲು ಮನಸ್ಸು ಮಾಡಿ "ಕ್ರಾಂತಿಯೋಗಿ ಬಸವಣ್ಣ" ಸಿನಿಮಾ ನಿರ್ಮಾಣ ಮಾಡಿಯೇ ಬಿಟ್ಟರು. ಆ ಸಿನಿಮಾ ನೋಡಿದ ಯಾರಿಗಾದರೂ ಮಾತಾಜಿಯವರ ಪರಿಶ್ರಮ ಪಾಂಡಿತ್ಯದ ಅರಿವಾಗುತ್ತದೆ. ಪಾತ್ರಧಾರಿಗಳ ವೇಷ ಭೂಷಣ, ಸಂಭಾಷಣೆ, ಪಾತ್ರಧಾರಿಗಳ ಆಯ್ಕೆ ಎಲ್ಲ ವಿಷಯಗಳಲ್ಲೂ  ಮಾತಾಜಿ ಹಗಲು ರಾತ್ರಿ ಬೆವರು ಸುರಿಸಿದ್ದರು.

ಎಲ್ಲ ಅನುಕೂಲಗಳ ಮಧ್ಯ ಪುರುಷ ಸಾಧಿಸಿದರೆ ಅದು ಖಂಡಿತ ಸಾಧನೆ ಅಲ್ಲ. ಏಕೆಂದರೆ ಆತನಿಗೆ ಪೂರಕ ವಾತಾವರಣವಿರುತ್ತದೆ. ಆದರೆ ಎಲ್ಲ ಪ್ರತಿಕೂಲ ವಾತಾವರಣದಲ್ಲಿಯೂ ಮಹಿಳೆ ಮಾಡಿದ್ದು ಖಂಡಿತ ಸಾಧನೆ ಎಂತಲೇ ಹೇಳಬೇಕು. ಮಾತೆ ಮಹಾದೇವಿ ಬದುಕಿನುದ್ದಕ್ಕೂ ಪ್ರವಾಹದ ವಿರುದ್ಧವೇ ಈಜಿ ಜಯಿಸಿದರು. ಕಾವಿಯುಟ್ಟ ಸ್ವಾಮಿಗಳ ಮಧ್ಯ ಹತ್ತರಲ್ಲಿ ಹನ್ನೊಂದರಂತಾಗದೆ ಬದುಕಿದರು.

ತತ್ವಶಾಸ್ತ್ರದಲ್ಲಿ ಮಾತ್ರವಲ್ಲದೆ ಇಂಗ್ಲಿಷ್ ಸಾಹಿತ್ಯದಲ್ಲೂ ಕೂಡ ಸ್ನಾತ್ತಕೋತ್ತರ ಪದವಿ ಪಡೆದಿದ್ದರು. ಬಿ.ಎಸ್‌ಸ್ಸಿ ಓದುವಾಗ ಅವರ ಗುರುಗಳಾದ ಡಾ. ಲಿಂಗಾನಂದ ಸ್ವಾಮಿಜಿಯವರ ಪ್ರವಚನದಿಂದ ಪ್ರಭಾವಿತರಾಗಿ ಜಂಗಮ ದೀಕ್ಷೆ ಪಡೆದರು. ಋಷಿಕೇಶದಲ್ಲಿ ಸಾಧನೆ ಮಾಡಿ ಗಂಗಾತರಂಗ ಪುಸ್ತಕ ರಚಿಸಿದರು. ನಂತರ ಬಸವ ತತ್ವ ದರ್ಶನ, ಹೆಪ್ಪಿಟ್ಟ ಹಾಲು ಇತ್ಯಾದಿ ಕೃತಿಗಳ ಜೊತೆಗೆ ನೂರೈವತ್ತಕ್ಕೂ ಹೆಚ್ಚು ಸಾಮಾಜಿಕ ಮತ್ತು ಬಸವ ತತ್ವದ ಕೃತಿಗಳನ್ನು ಹೊರ ತಂದರು. ಅವರು ಧಾರ್ಮಿಕ ಕ್ಷೇತ್ರ ಬಿಟ್ಟು ಕೇವಲ

ಸಾಹಿತ್ಯ ರಚನೆಗೆ ಒತ್ತು ಕೊಟ್ಟಿದ್ದರೆ ಜ್ಞಾನಪೀಠ ಪುರಸ್ಕೃತರ ಸಾಲಿನಲ್ಲಿರುತ್ತಿದ್ದರು. ತಮ್ಮ ಇಪ್ಪತ್ನಾಲ್ಕನೇ ವಯಸ್ಸಿನಲ್ಲಿ (1970 ರಲ್ಲಿ) ಅಕ್ಕ ಮಹಾದೇವಿ ಮಹಿಳಾ ಜಗದ್ಗುರು ಪೀಠ ಸ್ಥಾಪನೆ ಮಾಡಿ ವಿಶ್ವದ ಪ್ರಥಮ ಮಹಿಳಾ ಜಗದ್ಗುರುವಾಗಿ ಹೊರ ಹೊಮ್ಮಿದರು. ಮಹಿಳೆ ಪೂಜೆ, ಪುನಸ್ಕಾರಗಳಿಗೆ ಅನರ್ಹಳು ಎಂದು ವೈದಿಕ ಗುಂಪು ಮೂಲೆಗುಂಪು ಮಾಡಿರುವಾಗ ಜಗದ್ಗುರುವಾಗಿ ಹೊರ ಹೊಮ್ಮಿರುವುದು ಇತಿಹಾಸವೇ ಸರಿ, ನಂತರದ ಅವರ ಬದುಕೆಲ್ಲ ಬಸವತತ್ವಕ್ಕೆ ಮೀಸಲು ಹಳ್ಳಿ ಹಳ್ಳಿಗೆ ಕಾಲ್ನಡಿಗೆಯಲ್ಲಿಯೇ ಹೋಗಿ ಪ್ರವಚನ ಮಾಡಿ ಜನರಿಗೆ ವಚನ ತತ್ವಗಳ ಅರಿವು ಮೂಡಿಸಿದರು, ಒಬ್ಬ ಮಹಿಳೆ ಇಷ್ಟೊಂದು ಪ್ರಭಾವಿಯಾಗಿ ಮಾತಾಡುತ್ತಾರೆಂದರೆ ಭಕ್ತರು ಯುದ್ಧೋಪಾದಿಯಲ್ಲಿ ಬಂದು ಸೇರಿದರು. ಆಮೇಲೆ ನಡೆದುದ್ದೆಲ್ಲ ಪವಾಡ. ದೇಶ ವಿದೇಶಗಳಲ್ಲಿ ಬಸವ ತತ್ವ ಪ್ರಚಾರ ಮಾಡಿದರು ವಿಶ್ವಕಲ್ಯಾಣ ಮಿಷನ್ ಸ್ಥಾಪಿಸಿದರು. ಬೆಂಗಳೂರಿನಲ್ಲಿ ಅನುಭವ ಮಂಟಪ, ಕುಂಬಳಗೋಡಿನಲ್ಲಿ ಬಸವ ಗಂಗ್ರೋತ್ರಿ ಆಶ್ರಮ ಮಾಡಿದರು, 1983 ಕ್ರಾಂತಿಯೋಗಿ ಬಸವಣ್ಣ ಎಂಬ ಚಲನಚಿತ್ರ ನಿರ್ಮಾಣ ಮಾಡಿದರು. ಬಹುಶಃ ಬೇರೆ ಯಾವುದೇ ಜಗದ್ಗುರುಗಳು ಇಂತಹ ನೂತನ ಪ್ರಯತ್ನ ಮಾಡಿರಲಿಕ್ಕಿಲ್ಲ, ಕೂಡಲಸಂಗಮದಲ್ಲಿ ಬಸವ ಧರ್ಮ ಪೀಠ ಸ್ಥಾಪನೆ ಮಾಡಿದರು, ಬೆಂಗಳೂರಿನ ಬಸವ ಮಂಟಪ ಕಟ್ಟುವಾಗ ಮಾತಾಜಿ ತಲೆ ಮೇಲೆ ಇಟ್ಟಿಗೆ ಸಿಮೆಂಟ್ ಹೊತ್ತಿದ್ದಾರೆ, ಯಾವತ್ತೂ ಅವರು ಸ್ವಾಮೀಜಿಗಳಂತೆ ವರ್ತಿಸಲಿಲ್ಲ. ಇಂದು ಕೂಡಲಸಂಗಮ, ಬಸವಕಲ್ಯಾಣ, ಉಳವಿ ಮುಂತಾದ ಶರಣ ಕ್ಷೇತ್ರಗಳು ಪ್ರವಾಸಿ ಕ್ಷೇತ್ರಗಳಾಗಿ ನಿಲ್ಲುವಲ್ಲಿ ಮಾತಾಜಿಯವರ ಹೋರಾಟ ಪಾತ್ರ ಬಹಳ ದೊಡ್ಡದು, 55 ವರ್ಷಗಳ ಕಾಲ ಬಸವ ತತ್ವವನ್ನು ಉಸಿರಾಗಿಸಿಕೊಂಡು ಕಷ್ಟ ನಿಂದೆಗಳನ್ನು ಮೆಟ್ಟಿ ನಿಂತು ಅಭಿನವ ಅಕ್ಕಮಹಾದೇವಿ ಎಂತಲೇ ಕರೆಸಿಕೊಂಡರು. ಬಸವ ಜಯಂತಿಯಂದು ಇಂದಿಗೂ ಹಲವು ಕ್ಯಾಲೆಂಡರ್ ಗಳಲ್ಲಿ ನಂದಿಯ ಚಿತ್ರವಿರುವುದನ್ನು ಕಾಣುತ್ತೇವೆ. ಬಸವ ಜಯಂತಿ ಎಂದರೆ ನಂದಿಯನ್ನು ಪೂಜಿಸುವ ಕಾಲವಿತ್ತು. ಆದರೆ ಬಸವ ಜಯಂತಿ ಎಂದರೆ ಶಿವಶರಣ ಅಣ್ಣ ಬಸವಣ್ಣನವರ ಜಯಂತಿ ಎಂದು ಜಗತ್ತಿಗೆ ತೋರಿಸಿದರು. ಸನ್ಯಾಸತ್ವ ಎಂಬುದ ಕೇವಲ ಪುರುಷರಿಗೆ ಮಾತ್ರ, ಹೆಣ್ಣು ಕೇವಲ ಬಸಿರು, ಬಾಣಂತನಗಳಲ್ಲಿಯೇ ಬಾಳಬೇಕು ಎಂದವರಿಗೆ ಪ್ರಥಮ ಮಹಿಳಾ ಜಗದ್ಗುರುವಾಗಿ ರಾರಾಜಿಸಿದರು. ಮಾತಾಜಿರವರು ಬಸವಾದಿ ಶರಣರ ಹಲವು ಪೀಠ ಸ್ಥಾಪಿಸಿ ಜಾತಿ, ವರ್ಣ, ವರ್ಗರಹಿತ ಸಮಾಜದ ಸರ್ವಾಂಗೀಣ ಅಭಿವೃದ್ಧಿಯ ಸಂಕಲ್ಪ ಹೊತ್ತು ಸಮಾಜವೇ ಬೆರಗಾಗುವಂತೆ ಸಾಮಾಜಿಕ ಕೆಲಸಗಳನ್ನು ಮಾಡಿದರು. ಹಲವಾರು ಜನ ಇವರ ಪ್ರೇರಣೆಯಿಂದ ಅಧ್ಯಾತ್ಮ ಸಾಧಕರಾಗಿದ್ದಾರೆ. ಇವರ ಹಲವು ಅನಾಥಾಶ್ರಮಗಳಲ್ಲಿ ಮಕ್ಕಳು ಆಶ್ರಯ ಪಡೆದು ಶರಣ ಜೀವನ ಸಾಗಿಸುತ್ತಲಿದ್ದಾರೆ.

**ಬಸವತತ್ವ ಪ್ರಸಾರ**

ಬಸವತತ್ವ ಪ್ರಸಾರಕ್ಕಾಗಿ ಮಾತೆ ಮಹಾದೇವಿಯವರು 1993ರಲ್ಲಿ ಪ್ರಥಮ ಬಸವ ಧರ್ಮ ಸಮ್ಮೇಳನನ್ನು ತಮಿಳುನಾಡಿನ ಉದಕಮಂಡಲ (ಊಟಿ) ದಲ್ಲಿ ಏರ್ಪಡಿಸಿದ್ದರು. ನಂತರ 1994ರಲ್ಲಿ ಹೈದರ್‌ಬಾದ್‌ನಲ್ಲಿ, 1995ರಲ್ಲಿ ಬೆಂಗಳೂರಿನಲ್ಲಿ ನಂತರ ಧಾರವಾಡ, ದೆಹಲಿ, ಮುಂಬೈಗಳಲ್ಲಿ ಬಸವ ಧರ್ಮ ಸಮ್ಮೇಳನ ಹಮ್ಮಿಕೊಂಡು ಪರರಾಜ್ಯಗಳಲ್ಲೂ ಅಪಾರ ಸಂಖ್ಯೆಯ ಭಕ್ತಗಣವನ್ನು ಸಂಘಟಿಸಿದ್ದರು. ಬಸವಣ್ಣನ ಹೆಸರು ಬಳಸಿಕೊಂಡು ಬೆಳೆಯುವ ಯಾವ ಸ್ವಾಮೀಜಿಯೂ ಕೂಡ ಬಸವಾದಿ ಶರಣರ

ಆಶ್ರಮಗಳನ್ನು ಕಟ್ಟಲಿಲ್ಲ. ಆದರೆ ಮಾತೆ ಮಹಾದೇವಿಯವರು ಶರಣರ ಕಾರ್ಯಕ್ಷೇತ್ರ ಹಾಗೂ ಜನ್ಮಸ್ಥಳಗಳಲ್ಲಿಯೇ ಆಶ್ರಮಗಳನ್ನು ಸ್ಥಾಪಿಸಿ ಆ ಸ್ಥಳದ ಮಹಿಮೆಯನ್ನು ಸಮಾಜಕ್ಕೆ ಪರಿಚಯಿಸಿ ಪಾವನ ಕ್ಷೇತ್ರಕ್ಕೆ ಮಹತ್ವ ತಂದುಕೊಟ್ಟರು. ಬಸವಣ್ಣನವರ ಸಮತಾವಾದದ ತಳಹದಿಯ ಮೇಲೆ ನಂಬಿಕೆ ಹೊಂದಿದ್ದ ಮಾತೆ ಮಹಾದೇವಿ ಸಮಾಜದಲ್ಲಿ ಮನೆ ಮಾಡಿದ್ದ ಮೂಢನಂಬಿಕೆ, ಅಸ್ಪೃಶ್ಯತೆ, ಬಡತನ, ಶೋಷಣೆ ಮುಂತಾದವುಗಳ ವಿರುದ್ಧ ಹಗಲಿರುಳು ಹೋರಾಡಿ ಬಸವಣ್ಣನ ತತ್ವಾಚರಣೆ ಮತ್ತು ಪ್ರಸಾರಕ್ಕಾಗಿ ಬತ್ತಿಯಂತೆ ಸುಟ್ಟು ಪ್ರಜ್ವಲಿಸಿದ ಮಹಾಜ್ಯೋತಿಯಾದರು. ಸತತತ ಐದು ದಶಕಗಳ ಕಾಲ ಲಿಂಗಾಯತ ಧರ್ಮ ಮತ್ತು ಬಸವತತ್ವದ ಪ್ರಸಾರ ಮತ್ತು ಪ್ರಚಾರದಲ್ಲಿ ತೊಡಗಿಸಿಕೊಂಡರು.

ಮಾತೆ ಮಹಾದೇವಿಯವರು ಕೂಡಲಸಂಗಮದಲ್ಲಿ ಬಸವಧರ್ಮ ಪೀಠ, ಧಾರವಾಡದಲ್ಲಿ ಅಕ್ಕಮಹಾದೇವಿ ಅನುಭಾವ ಪೀಠ, ಬಸವಕಲ್ಯಾಣದಲ್ಲಿ ಅಲ್ಲಮಪ್ರಭು ಶೂನ್ಯಪೀಠ, ಮಹಾರಾಷ್ಟ್ರದ ಅಲ್ಲಮಗಿರಿಯಲ್ಲಿ ಅಲ್ಲಮಪ್ರಭು ಯೋಗಪೀಠ, ಬೆಂಗಳೂರಿನ ಬಸವಗಂಗೋತ್ರಿಯಲ್ಲಿ ಚನ್ನಬಸವೇಶ್ವರ ಜ್ಞಾನಪೀಠ, ಉಳವಿಯಲ್ಲಿ ಅಕ್ಕನಾಗಾಲಾಂಬಿಕೆ ಪೀಠ, ದೆಹಲಿಯಲ್ಲಿ ಬಸವ ಮಂಟಪಗಳನ್ನು ಸ್ಥಾಪಿಸಿ ಆ ಪೀಠಗಳ ಮೂಲಕ ಬಸವತತ್ವ ಪಸರಿಸುವ ಸಾಮಾಜಿಕ ಕಾರ್ಯ ನಿರಂತರವಾಗಿ ಸಾಗುವಂತೆ ಮಾಡಿದ್ದಾರೆ.

**ಸಾಮಾಜಿಕ ಕಾರ್ಯಗಳು**

2011ರಲ್ಲಿ ಕೂಡಲಸಂಗಮದಲ್ಲಿ ಬಸವ ಕೃಪಾ ಅನಾಥಾಲಯ ನಿರ್ಮಿಸಿದರಲ್ಲದೆ 2014ರಲ್ಲಿ ಬಡ ಅನಾಥ ಮಕ್ಕಳಿಗಾಗಿ ಬಸವ ಭಾರತ ಪ್ರಾಥಮಿಕ ಶಾಲೆ ಸ್ಥಾಪಿಸಿದರು. 2013ರಲ್ಲಿ ಇವರಿಗೆ ಗೌರವ ಡಾಕ್ಟರೇಟ್ ದೊರೆಯಿತು, 350 ಕ್ಕೂ ಅಧಿಕ ಭಕ್ತಿಗೀತೆ ಮತ್ತು 150ಕ್ಕೂ ಹೆಚ್ಚು ಧಾರ್ಮಿಕ ಮತ್ತು ಸಾಮಾಜಿಕ ಕೃತಿ ರಚಿಸಿದ್ದಾರೆಂಬುದು ಹೆಮ್ಮೆಯ ವಿಷಯ ಜಗತ್ತಿಗೆ ಶರಣರ ತತ್ವಗಳನ್ನು, ಶರಣರ ತ್ಯಾಗವನ್ನು ಕಲ್ಯಾಣದಲ್ಲಿ ನಡೆದ ಕ್ರಾಂತಿಯನ್ನು ಅಂತರ್ಜಾತಿ ವಿವಾಹದಿಂದಾದ ಭೀಕರ ಶಿಕ್ಷೆಯನ್ನು ಜಗತ್ತಿಗೆ ತೋರಿಸಿದ ಜನುಮದಾತೆ. ಮಾತೆ ಮಹಾದೇವಿಯವರು ಯಾವ ಮಠಾಧೀಶರೂ, ಯಾವ ಮಂತ್ರಿಗಳೂ ಮಾಡದ ಸಾಧನೆಯನ್ನು ಮಾತಾಜಿ ಮಾಡಿ ಹೋಗಿದ್ದಾರೆ. ಸಾಮಾನ್ಯರಾಗಿ ಜನಿಸಿ ಅಸಾಮಾನ್ಯ ಸಾಧನೆ ಮಾಡಿ, ತಮ್ಮ ಬಳಿ ಬಂದ ಭಕ್ತರ ಭವರೋಗ ದೂರ ಮಾಡಿದವರು. ಅದೆಷ್ಟು ಅವಮಾನಗಳನ್ನು ಸನ್ಮಾನವಾಗಿ ಸ್ವೀಕರಿಸಿ ತಮಗೆ ತೊಂದರೆ ಕೊಟ್ಟವರನ್ನು ಕ್ಷಮಿಸಿದ ಮಹಾಮಾತೆ. ಮಠಾಧೀಶರೊಬ್ಬರು ಲಿಂಗಾಯತ ಧರ್ಮದ ಬಗ್ಗೆ ಹೋರಾಟ ಮಾಡುವವರೇ ಲಿಂಗೈಕ್ಯರಾಗುತ್ತಾರೆ ಎಂದು ನುಡಿದಿದ್ದರು ಆದರೆ ಅದಕ್ಕೂ ಮಾತಾಜಿ ತಣ್ಣಗೆ ಪ್ರತಿಕ್ರಿಯಿಸಿದ್ದರು. 'ಆಯುಷ್ಯವಿರುವವರೆಗೆ ಮಾತ್ರ ಬದುಕುತ್ತೇವೆ, ಆದರೆ ನಾವಿರಲಿ ಬಿಡಲಿ ಹೋರಾಟ ಮಾಡಲು ಸಾಕಷ್ಟು ಜನ ಇದ್ದಾರೆ' ಅಂತ ತಮಗೆ ಕೇಡು ಬಗೆದವರಿಗೂ ಪರಮಾತ್ಮ ಒಳಿತು ಮಾಡಲಿ ಎಂದವರು ಮಾತಾಜಿ. ತನಗಾಗಿ ತನ್ನ ಸ್ವಂತಕ್ಕಾಗಿ ಬಿಡಿಗಾಸು ಖರ್ಚು ಮಾಡಿದವರಲ್ಲ, ಎ.ಸಿ ಗಾಡಿಯಲ್ಲಿ ಕುಳಿತವರಲ್ಲ, ನೂರಾರು ಅನಾಥ ಮಕ್ಕಳಿಗೆ ಆಶ್ರಯ ನೀಡಿದರು, ಜೀವನವಿಡಿ ವಿವಾದಗಳು ಬೆನ್ನಟ್ಟಿದರೂ ಯಾರಿಗೂ ಹೆದರಿದವರಲ್ಲ, ಶರಣರ ಚಾರಿತ್ರ್ಯ ವಧೆಯಾಗುವ ಆನುದೇವಾ ಹೊರಗಣವನು ಕೃತಿ ಮುಟ್ಟುಗೋಲು ಹಾಕಿಸುವಲ್ಲಿ ಯಶಸ್ವಿಯಾದರು.

**ಉಪಸಂಹಾರ**

ಒಟ್ಟಾರೆ ಹೇಳುವುದಾದರೆ ಮಾತೆ ಮಹಾದೇವಿ ಸಾಹಿತ್ಯ ಮತ್ತು ಧಾರ್ಮಿಕ ಕ್ಷೇತ್ರಕ್ಕೆ ಅಪಾರವಾದ ಕೊಡುಗೆ ನೀಡಿ ಇಂದು ನಮ್ಮ ನಡುವೆ ಅಮರರಾಗಿದ್ದಾರೆ. ಸರ್ಕಾರದ ಒಂದಿನಿತೂ ಸಹಾಯವಿಲ್ಲದೆ ಬಸವಕಲ್ಯಾಣದಲ್ಲಿ 108 ಅಡಿ ಬಸವಣ್ಣನವರ ಮೂರ್ತಿ ನಿರ್ಮಿಸಿ ಶರಣರ ಕಾಯಕ, ಕೊಡುಗೆಗಳನ್ನು ಜಗತ್ತಿಗೆ ತೋರಿಸಿದರು. ವೀಣಾವಾದಕಿ, ಅದ್ಭುತ ಗಾಯಕಿ, ಅದ್ಭುತ ಭಾಷಣಕಾರ್ತಿ, ಅಸಾಮಾನ್ಯವಾದ ಪಾಂಡಿತ್ಯ, ಅಗಾಧ ಜ್ಞಾಪಕಶಕ್ತಿ, ಭಕ್ತರ ಆಪ್ತ ಸಮಾಲೋಚಕಿ ಬಸವತತ್ವವನ್ನೇ ಬಾಳಿನ ಉಸಿರಾಗಿಸಿಕೊಂಡು ಧರ್ಮ ಪ್ರಸಾರಕ್ಕಾಗಿ ಶ್ರಮಿಸಿದ ಮಾತೆ ಮರೆಯಾದರೂ ಅವರ ಪಸರಿಸಿದ ಶರಣತತ್ವಗಳು ಯುಗಯುಗಗಳಲ್ಲೂ ಬೆಳಗುತ್ತವೆ.

**ಪರಾಮರ್ಶನ/ಆಕರ ಗ್ರಂಥಗಳು**


- ಗಿರೀಶ್ ಬಿ. ಎಂ. (2019). ಡಾ.ಮಾತೆ ಮಹಾದೇವಿ ಎಂಬ ಬೆರಗು. ನಾನು ಗೌರಿ.ಕಾಂ ಆನ್‌ಲೈನ್ ಪತ್ರಿಕೆ, https://naanugauri.com/-ಮಾತೆ-ಮಹಾದೇವಿ-ಎಂಬ-ಬೆರಗು/ ಅಂತರ್ಜಾಲ ಕೊಂಡಿಯಿಂದ ದಿನಾಂಕ 06/08/2021 ರಂದು ಪಡೆದುಕೊಳ್ಳಲಾಗಿದೆ.
- ಸಂಪತ್ (ಮಾರ್ಚ್ 14, 2019). ಮಾತೆ ಮಹಾದೇವಿ ಇನ್ನಿಲ್ಲ: ಬಸವ ಧರ್ಮ ಪೀಠಾಧ್ಯಕ್ಷೆ ಲಿಂಗೈಕ್ಯ, ಅರಳಿಕಟ್ಟೆ, ಬೆಂಗಳೂರು.
- ಸಚ್ಚಿದಾನಂದ ಚಟ್ನಳ್ಳಿ (ಮಾರ್ಚ್ 13, 2021). ಲಿಂಗಾಯತ ಧರ್ಮದಿಗಂತದ ದಿವ್ಯ ನಕ್ಷತ್ರ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ ತಾಯಿಯವರು. ಬಸವಮಾರ್ಗ– ಅಂತರ್ಜಾಲ ತಾಣ, ಮಾಹಿತಿಯನ್ನು http://www.basavamarga.com/sachidananda-chattnalli/ ಕೊಂಡಿಯಿಂದ ದಿನಾಂಕ 28/08/2021 ರಂದು ಪಡೆದುಕೊಳ್ಳಲಾಗಿದೆ.
- ಸರ್ವಮಂಗಳಾ ಸಕ್ರಿ. (ಏಪ್ರೀಲ್ 23, 2021). ಶರಣರ ಮಹಿಳಾ ಸಬಲೀಕರಣ ಮತ್ತು ಧಾರ್ಮಿಕ ಸ್ವಾತಂತ್ರ್ಯ. ಬಸವಮಾರ್ಗ– ಅಂತರ್ಜಾಲ ತಾಣ, ಮಾಹಿತಿಯನ್ನು http://www.basavamarga.com/savamangla-sakkri/ ಕೊಂಡಿಯಿಂದ ದಿನಾಂಕ 28/08/2021 ರಂದು ಪಡೆದುಕೊಳ್ಳಲಾಗಿದೆ.